# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 239
2) ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)
3) ಉತ್ತರಿಸಬೇಕಾದ ದಿನಾಂಕ : 18-08-2026
4) ಉತ್ತರಿಸಬೇಕಾದ ಸಚಿವರು : ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮೀನುಗಾರರ ಸುರಕ್ಷತೆಗೆ ಸಂಬಂಧಿಸಿದಂತೆ ನೀಡುವ ಲೈಫ್ ಜಾಕೆಟ್‌ಗಳನ್ನು ವಿತರಿಸಲಾಗುತ್ತಿದೆಯೇ; | ಹೌದು. |
| ಆ) | ವಿತರಿಸುತ್ತಿದ್ದರೆ, ಕಳೆದ 3 ವರ್ಷಗಳಲ್ಲಿ ಎಷ್ಟು ಮೀನುಗಾರರಿಗೆ ವಿತರಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು); | ಕಳೆದ ಮೂರು ವರ್ಷಗಳಲ್ಲಿ ಮೀನುಗಾರರಿಗೆ ವಿತರಿಸಲಾದ ಲೈಫ್ ಜಾಕೆಟ್‌ಗಳ ಜಿಲ್ಲಾವಾರು ವಿವರವನ್ನು **ಅನುಬಂಧ -1** ರಲ್ಲಿ ನೀಡಲಾಗಿದೆ. |
| ಇ) | ಪ್ರಸ್ತುತ 2026-27ನೇ ಸಾಲಿನಲ್ಲಿ ಎಷ್ಟು ಅನುದಾನವನ್ನು ಮೀನುಗಾರರ ಲೈಫ್ ಜಾಕೆಟ್‌ಗಳಿಗೆ ಮೀಸಲಿಡಲಾಗಿದೆ; ಪ್ರಸ್ತುತ ಒಂದು ಲೈಫ್ ಜಾಕೆಟ್‌ನ ಮಾರುಕಟ್ಟೆ ಬೆಲೆ ಎಷ್ಟು; ಲೈಫ್ ಜಾಕೆಟ್‌ಗಳನ್ನು ಎಷ್ಟು ಮೀನುಗಾರರಿಗೆ ವಿತರಿಸಲಾಗಿದೆ; ಇಲ್ಲವಾದಲ್ಲಿ ಯಾವಾಗ ವಿತರಿಸಲಾಗುವುದು; ಇನ್ನೂ ಕೂಡ ಎಷ್ಟು ಮೀನುಗಾರರಿಗೆ ಲೈಫ್ ಜಾಕೆಟ್ ವಿತರಿಸಲು ಬಾಕಿ ಇದೆ; ಲೈಫ್ ಜಾಕೆಟ್‌ನ ಬಾಳಿಕೆ ಅವಧಿ ಎಷ್ಟು; | 2026-27ನೇ ಸಾಲಿಗೆ ರಾಜ್ಯದ ಮೀನುಗಾರರಿಗೆ ಸಲಕರಣೆ ಕಿಟ್‌ಗಳನ್ನು ವಿತರಣೆ ಮಾಡಲೆಂದು ರೂ604.00 ಲಕ್ಷಗಳನ್ನು ಮೀಸಲಿಡಲಾಗಿದೆ. ಜಿಲ್ಲೆಗಳಲ್ಲಿ ಸಲ್ಲಿಕೆಯಾಗುವ ಬೇಡಿಕೆಗೆ ಅನುಗುಣವಾಗಿ ಹಾಗು ಲಭ್ಯವಿರುವ ಅನುದಾನದ ಮೇಲೆ ಲೈಫ್ ಜಾಕೆಟ್‌ಗಳನ್ನು ವಿತರಣೆ ಮಾಡಲಾಗುವುದು.<br><br>ಪ್ರಸ್ತುತ ಲೈಫ್ ಜಾಕೆಟ್‌ನ ಬೆಲೆ ಮಾರುಕಟ್ಟೆಯಲ್ಲಿ ಅಂದಾಜು ರೂ.1,500.00 ರಿಂದ ರೂ.2,500.00ವರೆಗೂ ಇದೆ.<br><br>ಬೇಡಿಕೆ ಹಾಗು ಅನುದಾನ ಲಭ್ಯತೆಗೆ ಅನುಗುಣವಾಗಿ ಲೈಫ್ ಜಾಕೆಟ್‌ಗಳನ್ನು ಖರೀದಿಸಿ ವಿತರಣೆ ಮಾಡಲು ನಿಯಮಾನುಸಾರ ಟೆಂಡರ್ ಪ್ರಕ್ರಿಯೆಗೆ ಚಾಲನೆಯನ್ನು ನೀಡಲಾಗಿದೆ.<br><br>ಲೈಫ್‌ಜಾಕೆಟ್‌ನ ಬಾಳಿಕೆ ಅವಧಿಯು ಉಪಯೋಗಿಸುವ ಆಧಾರದ ಮೇಲೆ ಅವಲಂಬಿತವಾಗಿರುತ್ತದೆ. ಸಾಮಾನ್ಯ ವಾಗಿ 04 ರಿಂದ 05 ವರ್ಷಗಳವರೆಗೆ ಬಾಳಿಕೆ ಬರುತ್ತದೆ. |
| ಈ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಕರಾವಳಿ ಭಾಗಗಳಲ್ಲಿ ಎಷ್ಟು ಮೀನುಗಾರರು ಅವಘಡಗಳಿಂದ ಸಾವನ್ನಪ್ಪಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು); ಅವಘಡಗಳಿಂದ ಸಾವನ್ನಪ್ಪಿದ ಮೀನುಗಾರರ ಕುಟುಂಬಕ್ಕೆ ಎಷ್ಟು ಪರಿಹಾರಧನವನ್ನು ನೀಡಲಾಗಿದೆ; | ಕಳೆದ ಮೂರು ವರ್ಷಗಳಲ್ಲಿ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಮೀನುಗಾರಿಕೆ ನಡೆಸುವಾಗ ಮೃತಪಟ್ಟಿರುವವರ ಸಂಖ್ಯೆ ಮತ್ತು ಅವರ ಕುಟುಂಬಗಳಿಗೆ ನೀಡಿದ ಪರಿಹಾರದ ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಉ) | ರಾಜ್ಯದಲ್ಲಿ ಕರಾವಳಿ ಮೀನುಗಾರರ ಸುರಕ್ಷತೆಯ ದೃಷ್ಟಿಯಿಂದ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? (ವಿವರ ಒದಗಿಸುವುದು) | ಕರಾವಳಿ ಮೀನುಗಾರರ ಸುರಕ್ಷತೆಯ ದೃಷ್ಟಿಯಿಂದ ಕೈಗೊಂಡಿರುವ ಕ್ರಮಗಳ ವಿವರ ಕೆಳಕಂಡಂತಿದೆ:-<br><br>❖ ಮೀನುಗಾರರು ಮೀನುಗಾರಿಕೆಗೆ ತೆರಳುವ ದೋಣಿಗಳಲ್ಲಿ ಕಡ್ಡಾಯವಾಗಿ ಮೀನುಗಾರರ ಸಂಖ್ಯೆಗೆ ಅನುಗುಣವಾಗಿ ಜೀವರಕ್ಷಕ ಸಾಧನಗಳಾದ ಲೈಫ್‌ಜಾಕೆಟ್ ಮತ್ತು ಲೈಫ್ ಬಾಯ್ ಇರುವುದನ್ನು ಖಚಿತಪಡಿಸಿಕೊಂಡ ನಂತರವೇ ಮೀನುಗಾರಿಕೆ ಇಲಾಖೆಯು ಮೀನುಗಾರರಿಗೆ ಪರವಾನಗಿ ನೀಡುತ್ತಿದೆ ಹಾಗೂ ಜೀವರಕ್ಷಕ ಸಾಧನಗಳನ್ನು ಬಳಸುವ ಬಗ್ಗೆ ಮೀನುಗಾರರಿಗೆ ನಿಯಮಿತವಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. |

| | | |
|---|---|---|
| | | ❖ ಮುನ್ಸೂಚಿತ ಹವಾಮಾನ ವರದಿಗಳನ್ನು ಸಾರ್ವಜನಿಕವಾಗಿ ಲಭ್ಯವಾಗುವಂತೆ ಹಾಗೂ ವಿಶೇಷವಾಗಿ ಮೀನುಗಾರರಿಗೆ ತಲಪುವಂತೆ ವಿವಿಧ ಸಮೂಹ ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮಗಳ (Whatsapp) ಮುಖಾಂತರ ಪ್ರಚಾರ ಪಡಿಸಲಾಗುತ್ತಿದೆ.<br><br>❖ ರಾಜ್ಯದ ಕರಾವಳಿ ತೀರದ ಮೀನುಗಾರಿಕೆ ಬಂದರುಗಳು, ಇಳಿದಾಣ ಕೇಂದ್ರಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಸಾಮಾಜಿಕ ಮಾಧ್ಯಮಗಳಲ್ಲಿ ಮತ್ತು ಮೀನುಗಾರರ ವೈಯಕ್ತಿಕ ದೂರವಾಣಿ ಸಂಖ್ಯೆಗೆ ಮುನ್ನೆಚ್ಚರಿಕೆ ಸಂದೇಶಗಳನ್ನು ಹಂಚಿಕೊಳ್ಳಲಾಗುತ್ತಿದೆ.<br><br>❖ ಕರಾವಳಿ ತೀರದ ಪಂಚಾಯ್ತಿಗಳಿಂದ ಮೀನುಗಾರರು ಹೆಚ್ಚಿರುವ ಗ್ರಾಮಗಳಲ್ಲಿ ಮುನೆಚ್ಚರಿಕೆಯ ಪ್ರಕಟಣೆ ಯನ್ನು ಟಾಮ್ ಟಾಮ್ ಹಾಗು ಭಿತ್ತಿಪತ್ರಗಳನ್ನು ಹಂಚುವ ಮೂಲಕ ಪ್ರಚಾರ ಪಡಿಸಲಾಗುತ್ತಿದೆ.<br><br>❖ ಮೀನುಗಾರರ ಹಾಗೂ ಅವರ ದೋಣಿಗಳ ಸುರಕ್ಷತೆಗಾಗಿ ISRO ಅಭಿವೃದ್ಧಿಪಡಿಸಿರುವ GPS ಆಧಾರಿತ (SOS) ದ್ವಿಮುಖ ಸರಳ ಸಂವಹನ (Two way communication) (TRANSPONDERS) ವ್ಯವಸ್ಥೆಯನ್ನು ಎಲ್ಲಾ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಲ್ಲಿ ಅಳವಡಿಸಲಾಗುತ್ತಿದೆ. ಇದರಿಂದ ಸಮುದ್ರದಲ್ಲಿ ವಾತಾವರಣದ ವೈಪರೀತ್ಯಗಳಿರುವ ವೇಳೆ, ಮೀನುಗಾರರ ಜೀವಕ್ಕೆ ಅಪಾಯವಾಗುವ ಅಥವಾ ದೋಣಿ ಅವಘಡಗಳಾಗುವ ಸಂದರ್ಭಗಳಲ್ಲಿ ಸಂರಕ್ಷಣಾ ಪಡೆಗೆ ತಕ್ಷಣ ಮಾಹಿತಿ ರವಾನಿಸಲು ಹಾಗೂ ಅಪಾಯದಲ್ಲಿರುವ ಮೀನುಗಾರರಿಗೆ ಸಂರಕ್ಷಣಾ ಪಡೆಯು ಮಾಹಿತಿ ರವಾನಿಸಲು ಸಾಧ್ಯವಾಗುತ್ತದೆ.<br><br>❖ ಪ್ರಸಕ್ತ ಸಾಲಿನಲ್ಲಿ ಸಮುದ್ರದಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವಾಗ ಸಂಕಷ್ಟಕ್ಕೀಡಾದವರನ್ನು ರಕ್ಷಿಸಲು ಹಾಗು ಅಗತ್ಯ ವೈದ್ಯಕೀಯ ಸೇವೆಗಳನ್ನು ನೀಡಲು ಅನುವಾಗಲು Sea Ambulance ಸೇವೆಯನ್ನು ಒದಗಿಸಲು ತೀರ್ಮಾನಿಸಲಾಗಿದ್ದು, Sea Ambulance ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ. |

ಸಂಖ್ಯೆ: ಪಸಂಮೀ ಇ-90 ಮೀಇಇ 2026

(ಕೆ.ಎಸ್. ಬಸವಂತಪ್ಪ)
ಮುಜರಾಯಿ, ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲಸಾರಿಗೆ ಸಚಿವರು

## ಅನುಬಂಧ-1

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) ರವರ ಪ್ರಶ್ನೆಸಂಖ್ಯೆ: 186(239)**

| ಕ್ರ.ಸಂ | ಜಿಲ್ಲೆ | ವಿತರಿಸಲಾದ ಲೈಫ್ ಜಾಕೇಟ್ ಗಳ ಸಂಖ್ಯೆ | | |
|---|---|---|---|---|
| | | 2023-24 | 2024-25 | 2025-26 |
| 1 | ಯಾದಗಿರಿ | 0 | 0 | 90 |
| 2 | ಶಿವಮೊಗ್ಗ | 295 | 289 | 281 |
| 3 | ಚಿಕ್ಕಬಳ್ಳಾಪುರ | 0 | 57 | 60 |
| 4 | ಕೊಪ್ಪಳ | 25 | 15 | 30 |
| 5 | ಚಾಮರಾಜನಗರ | 46 | 59 | 40 |
| 6 | ಕಲಬುರಗಿ | 65 | 0 | 0 |
| 7 | ಕೊಡಗು | 0 | 0 | 0 |
| 8 | ಗದಗ | 0 | 0 | 0 |
| 9 | ಬಾಗಲಕೋಟೆ | 60 | 64 | 51 |
| 10 | ಬೆಂಗಳೂರು ಗ್ರಾಮಾಂತರ | 0 | 0 | 0 |
| 11 | ಬೆಂಗಳೂರು ನಗರ | 0 | 0 | 0 |
| 12 | ಹಾವೇರಿ | 0 | 0 | 0 |
| 13 | ಚಿಕ್ಕಬಳ್ಳಾಪುರ | 0 | 57 | 60 |
| 14 | ಕೋಲಾರ | 0 | 0 | 0 |
| 15 | ಬೆಂಗಳೂರು ದಕ್ಷಿಣ ಜಿಲ್ಲೆ | 0 | 0 | 200 |
| 16 | ತುಮಕೂರು | 393 | 360 | 172 |
| 17 | ಹಾಸನ | 74 | 206 | 186 |
| 18 | ಚಿಕ್ಕಮಗಳೂರು | 0 | 8 | 0 |
| 19 | ಉತ್ತರ ಕನ್ನಡ-ಕಾರವಾರ | 290 | 545 | 0 |
| 20 | ಮೈಸೂರು | 0 | 0 | 0 |
| 21 | ದಾವಣಗೆರೆ | 168 | 197 | 198 |
| 22 | ಚಿತ್ರದುರ್ಗ | 138 | 156 | 178 |
| 23 | ವಿಜಯನಗರ | 68 | 105 | 110 |
| 24 | ಬಳ್ಳಾರಿ | 25 | 15 | 18 |
| 25 | ರಾಯಚೂರು | 107 | 105 | 95 |
| 26 | ಬೀದರ್ | 0 | 0 | 0 |
| 27 | ಮಂಡ್ಯ | 96 | 97 | 99 |
| 28 | ಮಂಗಳೂರು | 0 | 0 | 160 |
| 29 | ಉಡುಪಿ | 180 | 170 | 193 |
| 30 | ಧಾರವಾಡ | 0 | 40 | 0 |
| 31 | ವಿಜಯಪುರ | 0 | 0 | 245 |
| | | **2030** | **2545** | **2466** |

ಮೀನುಗಾರಿಕೆ ನಿರ್ದೇಶಕರು
(ಒಳನಾಡು)

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಕೊಡ್ಗಿಲ ಬೈಲು) ಅವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1186 (239)

# ಅನುಬಂಧ-2

| ವರ್ಷ | 2023-24 | | 2024-25 | | 2025-26 | |
|---|---|---|---|---|---|---|
| ಜಿಲ್ಲೆ | ಮೃತಪಟ್ಟವರ ಸಂಖ್ಯೆ | ಮೃತರ ವಾರಸುದಾರರಿಗೆ ನೀಡಿದ ಪರಿಹಾರ ಮೊತ್ತ (ಲಕ್ಷಗಳಲ್ಲಿ) | ಮೃತಪಟ್ಟವರ ಸಂಖ್ಯೆ | ಮೃತರ ವಾರಸುದಾರರಿಗೆ ನೀಡಿದ ಪರಿಹಾರ ಮೊತ್ತ (ಲಕ್ಷಗಳಲ್ಲಿ) | ಮೃತಪಟ್ಟವರ ಸಂಖ್ಯೆ | ಮೃತರ ವಾರಸುದಾರರಿಗೆ ನೀಡಿದ ಪರಿಹಾರ ಮೊತ್ತ (ಲಕ್ಷಗಳಲ್ಲಿ) |
| ದಕ್ಷಿಣ ಕನ್ನಡ | 04 | 24.00 | 04 | 34.00 | 05 | 36.00 |
| ಉಡುಪಿ | 27 | 162.00 | 23 | 176.00 | 40 | 318.00 |
| ಉತ್ತರ ಕನ್ನಡ | 26 | 156.00 | 29 | 224.00 | 57 | 484.00 |
| ಒಟ್ಟು | **57** | **342.00** | **56** | **434.00** | **102** | **838.00** |

ಮೀನುಗಾರಿಕೆ ನಿರ್ದೇಶಕರು
(ಪ್ರ.ಪ್ರ.)